₹ 5
ಸಂಪುಟ: 4 ಸಂಚಿಕೆ: 279 ಪುಟಗಳು: 12
10.10.2019 ಗುರುವಾರ
**ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು
ದಾವಣಗೆರೆ | ಕಲಬುರಗಿ | ಬೆಳಗಾವಿ
@vishwavaninews
vishwavanitimely
epaper.vishwavani.news
vishwavani.news
ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ದಾರಿದೀಪೋಕ್ತಿ

ಬಹುತೇಕ ಸಂದರ್ಭಗಳಲ್ಲಿ ಅನುಮಾನ ನಿಜವಾಗದಿರಬಹುದು. ಆದರೆ ಅನುಭವ ಮಾತ್ರ ಸುಳ್ಳಾಗಲಾರದು. ಕಾರಣ ಅನುಮಾನ ಎಂಬುದು ನಿಮ್ಮ ಮನಸ್ಸಿನ ಕಲ್ಪನೆ. ಆದರೆ ಅನುಭವ ಎಂಬುದು ನೀವು ಪಡೆದುಕೊಂಡ ಜೀವನ ಸಾರ ಮತ್ತು ಬದುಕಿನ ಪಾಠ. ಬೇರೆಯವರ ಅನುಭವವನ್ನು ಅನುಮಾನಿಸಬಾರದು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗುರು

## ಹೊಯ್ಸಳ ಶಿಲ್ಪಶೈಲಿಯ ಪುನರುತ್ಥಾನ
## ಸ್ವಾನಂದ ಬಾಲಗಣಪತಿ

ಸಂ.ಪುಟ 6

### ಕಟ್ಟಕಡೆಯ ಆ ಗಂಡು ಫೇಂಡಾ ಮೃಗವೂ ಕಣ್ಮುಂದೇ ಕಣ್ಮರೆಯಾಯಿತು!

**ನೂರೆಂಟು ವಿಶ್ವ**
ವಿಶ್ವೇಶ್ವರ ಭಟ್

## ಪ್ರಮುಖ ಸುದ್ದಿ

### ತುಟ್ಟಿಭತ್ಯೆ ಹೆಚ್ಚಳ

**ದೆಹಲಿ:** ಕೇಂದ್ರ ಸರಕಾರಿ ಉದ್ಯೋಗಿಗಳು ಮತ್ತು ಪಿಂಚಣಿದಾರರ ತುಟ್ಟಿಭತ್ಯೆ (ಡಿಎ)ಯಲ್ಲಿ ಶೇ. 5ರಷ್ಟು ಹೆಚ್ಚಳ ಮಾಡುವ ಪ್ರಸ್ತಾವಕ್ಕೆ ಕೇಂದ್ರ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಇದರಿಂದಾಗಿ, ಹಿಂದಿದ್ದ ಶೇ. 12ರಿಂದ ಶೇ. 17ರ ಮಟ್ಟಕ್ಕೆ ಸದರಿ ಭತ್ಯೆ ಏರಿದಂತಾಗಿದೆ. 7ನೇ ಕೇಂದ್ರ ವೇತನ ಆಯೋಗದ ಶಿಫಾರಸುಗಳ ಅನುಸಾರ ಈ ಹೆಚ್ಚಳಕ್ಕೆ ಸಂಪುಟ ಮುಂದಾಗಿದ್ದು, 50 ಲಕ್ಷ ಕೇಂದ್ರ ಸರಕಾರಿ ನೌಕರರು ಮತ್ತು 65 ಲಕ್ಷ ಪಿಂಚಣಿದಾರರು ಈ ಕ್ರಮದಿಂದ ಪ್ರಯೋಜನ ಪಡೆಯಲಿದ್ದಾರೆ. ಪ್ರಸಕ್ತ ವರ್ಷದ ಜುಲೈನಿಂದ ಹೆಚ್ಚಳ ಅನ್ವಯವಾಗಲಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ.

### ನೊಬೆಲ್ ಪುರಸ್ಕಾರ

**ಸ್ಟಾಕ್‌ಹೋಮ್:** ರಸಾಯನಶಾಸ್ತ್ರದಲ್ಲಿ ನೀಡಲಾಗುವ 2019ರ ನೊಬೆಲ್ ಪುರಸ್ಕಾರವನ್ನು ಅಮೆರಿಕದ ಟೆಕ್ಸಾಸ್‌ನ ಜಾನ್ ಬಿ. ಗುಡ್‌ಎನಫ್, ನ್ಯೂಯಾರ್ಕ್‌ನ ಎಂ. ಸ್ಟಾನ್ಲೆ ವಿಟಿಂಗ್‌ಹ್ಯಾಂ ಮತ್ತು ಜಪಾನ್‌ನ ಅಕಿರಾ ಯೊಶಿನೊ ಎಂಬ ಮೂವರು ವಿಜ್ಞಾನಿಗಳಿಗೆ ನೀಡಲಾಗಿದೆ. ಲಿಥಿಯಂ-ಅಯಾನ್ ಬ್ಯಾಟರಿಗಳ ಅಭಿವೃದ್ಧಿಗೆ ನೀಡಿದ ಕೊಡುಗೆಗಾಗಿ ಈ ಪುರಸ್ಕಾರದ ಘೋಷಣೆಯಾಗಿದೆ.

### ಅಧಿವೇಶನ ಇಂದಿನಿಂದ

**ಬೆಂಗಳೂರು:** ಉಪಚುನಾವಣೆ ಘೋಷಣೆಯಿಂದ 10 ದಿನದ ಬದಲಿಗೆ ಮೂರು ದಿನಕ್ಕೆ ಇಳಿಸಿದ್ದ ಚಳಿಗಾಲ ಅಧಿವೇಶನ ಗುರುವಾರದಿಂದ ಆರಂಭವಾಗಲಿದ್ದು, ನೆರೆ ವಿಚಾರಕ್ಕೆ ಸಂಬಂಧಿಸಿದಂತೆ ಗದ್ದಲ ಎಬ್ಬಿಸಲು ವಿರೋಧ ಪಕ್ಷಗಳು ತಯಾರಾಗಿವೆ. ಆದರೆ ಈ ತಿಂಗಳ ಅಂತ್ಯಕ್ಕೆ ಕೊನೆಯಾಗಲಿರುವ ಆರ್ಥಿಕ ಬಿಲ್‌ಗೆ ಅನುಮೋದನೆ ಪಡೆಯಲು ಮಾತ್ರ ಈ ಅಧಿವೇಶನವನ್ನು ಸೀಮಿತಗೊಳಿಸಲು ಸರಕಾರ ತಂತ್ರ ರೂಪಿಸುತ್ತಿದೆ.

### ವಕ್ರತುಂಡೋಕ್ತಿ

ರಹಸ್ಯಗಳನ್ನು ಕಾಪಾಡುವುದರಲ್ಲಿ ಗಂಡಂದಿರನ್ನು ಮೀರಿಸುವವರು ಯಾರೂ ಇಲ್ಲ. ಅವರು ಅದನ್ನು ಯಾರಿಗೂ ಹೇಳುವುದಿಲ್ಲ. ಕಾರಣ ಅಸಲಿಗೆ ಅವರು ಕೇಳಿರುವುದೇ ಇಲ್ಲ.

# ಈ ಅವಧೂತರಿಗೆ ತಿಳಿಹೇಳುವವರು ಯಾರು?

**ವಿ. ಪ್ರಿಯದರ್ಶಿನಿ** ಮೈಸೂರು

ಚಲನಚಿತ್ರ ನಟ ಕಿಚ್ಚ ಸುದೀಪ್ ಕುರಿತಂತೆ ಅವಧೂತರು ಎನಿಸಿಕೊಂಡಿರುವ ಇಬ್ಬರ ನಡುವೆ ಬಿಗ್ ಫೈಟ್ ಶುರುವಾಗಿದೆ. ಒಬ್ಬರು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಗೌರಿಗದ್ದೆ ಆಶ್ರಮದ ವಿನಯ್ ಗುರೂಜಿ, ಮತ್ತೊಬ್ಬರು ಮೈಸೂರಿನ ಅರ್ಜುನ್ ಗುರೂಜಿ.

ವಿನಯ್ ಗುರೂಜಿ ಇತ್ತೀಚೆಗೆ ಕಿಚ್ಚ ಸುದೀಪ್ ಕುರಿತಂತೆ ಅಪಹಾಸ್ಯವಾಗಿ ಆಡಿರುವ ಮಾತುಗಳು ಈ ಫೈಟ್‌ಗೆ ಕಾರಣವಾಗಿದೆ. ವಿನಯ್ ಗುರೂಜಿ ಆಡಿರುವ ಮಾತುಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿ, ನಟನ ಲಕ್ಷಾಂತರ ಅಭಿಮಾನಿಗಳು ವಿನಯ್ ಗುರೂಜಿ ಅವರ ಮುಖಕ್ಕೆ ಮಂಗಳಾರತಿ ಎತ್ತಿದ್ದಾರೆ.

'ಅದ್ಯಾರೋ ಮಾಣಿಕ್ಯ, ಹೆಬ್ಬುಲಿಯಂತೆ, ಸರಿಯಾದ ಹುಲಿ ಬಂದ್ರೆ ಓಡಿಹೋಗ್ತಾನೆ' ಎಂದು ಸುದೀಪ್‌ನನ್ನು ಕುರಿತಂತೆ ಅವರು ಲಘುವಾಗಿ ಮಾತನಾಡಿದ್ದಾರೆ. ಅದ್ಯಾವ ಸಂದರ್ಭವೋ ಅಥವಾ ಅದ್ಯಾವ ಸನ್ನಿವೇಶವೋ ಎಂಬುದು ತಿಳಿದಿಲ್ಲ, ಆದರೆ, ಸುಮ್ಮನೆ ಇರಲಾರದೇ ಅದೆಲ್ಲಿಗೋ ಅದೇನನ್ನೋ ಬಿಟ್ಟುಕೊಂಡರಂತೆ ಎಂಬಂತಹ ಈಗಿನ ಪರಿಸ್ಥಿತಿ ವಿನಯ್ ಗುರೂಜಿಯದ್ದು.

ಈ ಗುರೂಜಿ ಸಾಮಾನ್ಯರಲ್ಲ, ಅಸಾಮಾನ್ಯ ಅವಧೂತರಂತೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಮಾಜಿ ಸ್ಪೀಕರ್ ಕೆ. ರಮೇಶ್ ಕುಮಾರ್, ಮಾಜಿ ಸಚಿವ ಡಿ.ಕೆ.ಶಿವಕುಮಾರ್ ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮುಂತಾದವರು ವಿನಯ್ ಗುರೂಜಿ ಅವರ ಪಾದ ತಳದಲ್ಲಿ ಬಿದ್ದು ಹೊರಳಾಡಿ ಪಾವನವಾದವರಲ್ಲಿ ಅಗ್ರಗಣ್ಯರು.

ಇಂತಹ ಪ್ರಸಿದ್ಧಿ ಪಡೆದ ಈ ಗುರೂಜಿಗೆ ಈ ವಿವಾದದ ಹೇಳಿಕೆಯಾದರೂ ಏಕೆ ಬೇಕಿತ್ತು? ವಿನಯ್ ಗುರೂಜಿ ಅವರ ಹೇಳಿಕೆ ವೈರಲ್ ಆಗುತ್ತಿದ್ದಂತೆ ಮೈಸೂರಿನ ಮತ್ತೊಬ್ಬ ಅವಧೂತ ಅರ್ಜುನ್ ಗುರೂಜಿ, ಕಿಚ್ಚ ಸುದೀಪ್‌ನನ್ನು ಹಾಡಿ- ಹೊಗಳಿ, ತಮ್ಮದೇ ಆದ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.

'ನಮ್ಮ ಸುದೀಪ್ ಅವರ ಹೆಬ್ಬುಲಿ ಚಿತ್ರ ಉತ್ತಮ ಚಿತ್ರ. ಆ ಚಿತ್ರದ ಅವರ ನಟನೆಯನ್ನು ಬೇರೆ ಯಾರ ಕೈಲಿ ಮಾಡಲಿಕ್ಕೂ ಸಾಧ್ಯವಿಲ್ಲ. ಕನ್ನಡಿಗರು ಹುಲಿಗಳು ಎನ್ನುವುದನ್ನು ಸುದೀಪ್, ಹೆಬ್ಬುಲಿ ಚಿತ್ರದ ಮುಖೇನ ಜಗತ್ತಿಗೆ ಸಾರಿದ್ದಾರೆ. ಜತೆಗೆ ವಾಲ್ಮೀಕಿ ಸಮುದಾಯಕ್ಕೆ ಸ್ಥಿರತೆ ದೊರೆತಿದೆ. ದೇಶದಲ್ಲಿ ಕನ್ನಡ ಭಾಷೆಯನ್ನು ಎತ್ತಿಹಿಡಿಯುತ್ತಿರುವ ಕಲಾವಿದನನ್ನು ನಾವೆಲ್ಲರೂ ಗೌರವಿಸಬೇಕು' ಎಂಬುದು ಅರ್ಜುನ್ ಗುರೂಜಿ ಅವರ ಫರ್ಮಾನು. ಇವಿಷ್ಟೇ ಅಲ್ಲ, ಈ ಅವಧೂತರು ಎನಿಸಿಕೊಂಡವರು ಈ ಹಿಂದೆಯೂ ಹತ್ತು ಹಲವು ಅಸಂಬದ್ಧ ವಿಷಯಗಳಲ್ಲಿ ಮೂಗು ತೂರಿಸಿ, ಸಾರ್ವಜನಿಕ ವಲಯದಲ್ಲಿ ಟೀಕೆಗೆ ಒಳಗಾಗಿದ್ದರು.

ಓದುಗರ ಒಡಲಾಳ

ಕೆಫೆ ಕಾಫಿ ಡೇ ಮಾಲೀಕ ಸಿದ್ಧಾರ್ಥ ಸಾವಿನ ಬಗ್ಗೆಯೂ ಘಟನೆಗೆ ಮಂಚೆಯೇ ವಿನಯ್ ಗುರೂಜಿ ಸಿದ್ಧಾರ್ಥ ಅವರ ಮಗನಿಗೆ, 'ನಿಮ್ಮ ತಂದೆಗೆ ಸಂಕಷ್ಟ ಎದುರಾಗಲಿದೆ' ಎಂದು ಎಚ್ಚರಿಸಿದ್ದರಂತೆ. ಇದು ಸಹ ಸಾಮಾಜಿಕ ಜಾಲತಾಣಗಳಲ್ಲಿ ಕುಹಕ- ಕುಚೇಷ್ಟೆ ಕಾಮೆಂಟ್‌ಗಳಿಗೆ ಕಾರಣವಾಗಿತ್ತು.

ಅರ್ಜುನ್ ಗುರೂಜಿ ನಾನೇನೂ ಕಮ್ಮಿ ಇಲ್ಲ ಎಂಬಂತೆ ವೈಜ್ಞಾನಿಕ ಸವ್ಯ-ಅಪಸವ್ಯಗಳ ಬಗ್ಗೆ ಭವಿಷ್ಯ ನುಡಿದಿದ್ದಾರೆ. ಅವರು ಇತ್ತೀಚೆಗೆ ಚಂದ್ರಯಾನ 2 ರೇಡಾರ್‌ನೊಂದಿಗೆ ಖಂಡಿತ ಸಂಪರ್ಕ ಸಾಧಿಸಲಿದೆ ಎಂದು ಭವಿಷ್ಯ ನುಡಿದು ಸಾಕಷ್ಟು ಚರ್ಚೆಗೆ ಕಾರಣರಾದರು. ಸ್ವಘೋಷಿತ ಅವಧೂತರು ತಮ್ಮ ಕಾರ್ಯಕ್ಷೇತ್ರವಾದ ಅಧ್ಯಾತ್ಮಿಕ ಜಗತ್ತಿನ ಚಟುವಟಿಕೆಯನ್ನು ಹೊರತುಪಡಿಸಿ, ಮಿಕ್ಕ ಎಲ್ಲವನ್ನೂ ಮಾಡುತ್ತಿರುವಂತೆ ಕಾಣುತ್ತಿದೆ.

ಕುತೂಹಲ ಸಂಗತಿ ಎಂದರೆ ವಿನಯ್ ಗುರೂಜಿ ಮತ್ತು ಅರ್ಜುನ್ ಗುರೂಜಿ ತಮ್ಮನ್ನು ಸಖರಾಯ ಪಟ್ಟಣದ ಸದ್ಗುರು ಅವಧೂತ ಶ್ರೀ ವೆಂಕಟಾಚಲ ಮಹಾರಾಜ್ ಅವರ ಶಿಷ್ಯರು ಎಂದು ಹೇಳಿಕೊಳ್ಳುತ್ತಾರೆ. ಆದರೆ, ಇವರುಗಳ ಮಾತು, ಕೃತಿ, ನಿಜ ಜೀವನ ಒಂದಕ್ಕೊಂದು ತಾಳೆಯಾಗುವುದೇ ಇಲ್ಲ. ಈಗಲಾದರೂ ಸುದೀಪ್ ವಿಚಾರ ಕುರಿತಂತೆ ಇವರಿಬ್ಬರು ಪರ-ವಿರೋಧ ವಕಾಲತ್ತು ವಹಿಸುವ ಅವಶ್ಯಕತೆಯಾದರೂ ಏನಿತ್ತು?

ಇದರಿಂದ ಸಮಾಜಕ್ಕೆ ಇವರು ನೀಡುತ್ತಿರುವ ಸಂದೇಶವಾದರೂ ಏನು? ಎಂಬುದು ಚರ್ಚಾರ್ಹ ವಿಷಯ. ಅವಧೂತ ಪರಂಪರೆಯ ಪ್ರಮುಖರಾದ ದತ್ತಾತ್ರೇಯರ ಅಂಶಗಳೆಂದು ಹೇಳಿಕೊಳ್ಳುವ ಇವರುಗಳು ಸಾಮಾಜಿಕ ಸಭ್ಯತೆ, ಸೌಹಾರ್ದತೆ ಮತ್ತು ಸಂಯಮವನ್ನು ಅಳವಡಿಸಿಕೊಂಡು ದಿನ ನೂಕುವುದು ಸೂಕ್ತ. ಅಂದ ಹಾಗೆ, ಅವಧೂತ ಎಂದರೆ ಎಲ್ಲ ಹಂಗು ಮತ್ತು ಸಾಮಾಜಿಕ ಬಂಧಗಳನ್ನು ಕಳಚಿಕೊಳ್ಳುವ ಸ್ಥಿತಿ ಎಂಬುದನ್ನು ಇವರಿಗೆ ತಿಳಿ ಹೇಳುವವರು ಯಾರು?

ಅವಧೂತ ಮಹಾಶಯರೇ ನಿಮ್ಮ ಈ ವರ್ತನೆಗಳನ್ನು ನೋಡಿದರೆ ಪ್ರಾಯಶಃ ನಿಮಗೆ ಬೇರೆ ಕೆಲಸವೇ ಇಲ್ಲವೆಂದು ತೋರುತ್ತದೆ. ನಿಮ್ಮಗಳನ್ನು ಬೆಂಬಲಿಸಿ, ಹಿಂಬಾಲಿಸಿ ಪೂಜಿಸುವ ಸಾವಿರಾರು ಮಂದಿ ಭಕ್ತರ ಸಮೂಹವೇ ಇದೆ ಎಂಬುದನ್ನು ನೀವುಗಳು ಮರೆತಂತಿದೆ. ನಿಮ್ಮಗಳ ತೆವಲು-ತಿಮಿರುಗಳಿಗೆ ಅಮಾಯಕ ಭಕ್ತರನ್ನು ಎತ್ತಿಕಟ್ಟಿ ಸಮಾಜದ ಸ್ವಾಸ್ಥ್ಯವನ್ನು ಏಕೆ ಕೆಡಿಸುತ್ತೀರಿ? ಒಂದು ವೇಳೆ ಲೌಕಿಕದ ರಂಗುರಂಗು ಬದುಕಿನ ಸೋಂಕು ನಿಮ್ಮಲ್ಲಿ ಉಳಿದಿದ್ದೇ ಆದಲ್ಲಿ ನಿಮಗೆ ಇಷ್ಟವಾದ ನಟ-ನಟಿಯರ ಅಭಿಮಾನಿ ಸಂಘಗಳನ್ನು ಕಟ್ಟಿಕೊಂಡು ಅವರುಗಳಿಗೆ ಬಹುಪರಾಕ್ ಹೇಳಿಕೊಂಡು ಹೊಟ್ಟೆ ಹೊರೆಯಿರಿ. ಇಲ್ಲವೆ, ನಿಮ್ಮ ಕೆಲಸ ಮಾಡಿಕೊಂಡು ತೆಪ್ಪಗಿರಿ. ಯಾಕೋ ಅತಿಯಾಯಿತು ನಿಮ್ಮದು.

# ಬಂಡುಕೋರರಿಗೆ ನಿಗಮ ಅನರ್ಹರ ಹಾದಿ ಸುಗಮ

### ಅನರ್ಹ ಶಾಸಕರಿಗಿಲ್ಲ ಟಿಕೆಟ್ ತಪ್ಪುವ ಆತಂಕ | ಬಂಡಾಯ ನಾಯಕರಿಗೆ ನಿಗಮ ಮಂಡಳಿ ಹುದ್ದೆ ನೀಡಿದ ಸರಕಾರ | ಶರತ್ ಬಚ್ಚೇಗೌಡ, ನಂದೀಶ್ ರೆಡ್ಡಿ ಸೇರಿ ಎಂಟು ಜನರಿಗೆ ನಿಗಮ ಮಂಡಳಿ ಹುದ್ದೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಅನರ್ಹರ ವಿರುದ್ಧ ಬಂಡಾಯವೆದ್ದು ಸ್ಪರ್ಧಿಸಲು ಸಜ್ಜಾಗಿದ್ದ ಬಂಡಾಯ ನಾಯಕರಿಗೆ ನಿಗಮ ಮಂಡಳಿ ಸ್ಥಾನಮಾನ ನೀಡುವ ಮೂಲಕ ಅನರ್ಹರಿಗೆ ರಾಜ್ಯ ಬಿಜೆಪಿ ಸಿಹಿ ಸುದ್ದಿ ನೀಡಿದೆ.

ತಮ್ಮ ರಾಜಕೀಯ ಜೀವನವನ್ನು ಪಣಕ್ಕಿಟ್ಟು, ಬಿಜೆಪಿ ಸರಕಾರವನ್ನು ಅಧಿಕಾರಕ್ಕೆ ತಂದಿದ್ದ 17 ಅನರ್ಹ ಶಾಸಕರ ಪೈಕಿ ಎಂಟು ಶಾಸಕರಿಗೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪರಾಜಿತರಾಗಿದ್ದ ಬಿಜೆಪಿ ಅಭ್ಯರ್ಥಿಗಳಿಂದ ಭಾರಿ ಸ್ಪರ್ಧೆ ಏರ್ಪಟ್ಟಿತ್ತು. ಟಿಕೆಟ್ ನೀಡದಿದ್ದರೆ, ಬಂಡಾಯವೇಳುವ ಎಚ್ಚರಿಕೆಯನ್ನು ಈ ನಾಯಕರು ನೀಡಿದ್ದರು. ಆದ್ದರಿಂದ ಇದೀಗ ಬಂಡಾಯ ಏಳುವ ಸಾಧ್ಯತೆಯಿರುವ ನಾಯಕರಿಗೆ ನಿಗಮ-ಮಂಡಳಿ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನ ನೀಡುವ ಮೂಲಕ, ಬಂಡಾಯದ ಬಿಸಿಯನ್ನು ತಣಿಸಿದೆ.

ಎಂಟು ನಿಗಮ-ಮಂಡಳಿ ಪೈಕಿ ಶರತ್ ಬಚ್ಚೇಗೌಡ ಹೊರತುಪಡಿಸಿ ಇನ್ನುಳಿದ ಏಳು ನಾಯಕರು ನಿಗಮ ಮಂಡಳಿ ಸ್ಥಾನವನ್ನು ಒಪ್ಪಿಕೊಂಡಿದ್ದಾರೆ. ಆದರೆ ಶರತ್ ಬಚ್ಚೇಗೌಡ ಮಾತ್ರ, ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಸ್ಥಾನವನ್ನು ನಿರಾಕರಿಸುವ ಮೂಲಕ ಟಿಕೆಟ್ ನೀಡದಿದ್ದರೆ ಬಂಡಾಯ ಅಭ್ಯರ್ಥಿಯಾಗಿ ಮುಂದುವರಿಸುವ ಸ್ಪಷ್ಟ ಸೂಚನೆ ನೀಡಿದ್ದಾರೆ.

ಆರಂಭದಲ್ಲಿ ಉಪಚುನಾವಣೆ ಮುಗಿಯುವ ತನಕ 17 ಸಚಿವ ಸ್ಥಾನ ಹಾಗೂ ನಿಗಮ ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳನ್ನು ಭರ್ತಿ ಮಾಡದಿರಲು ಈ ಹಿಂದೆ ನಿರ್ಧರಿಸಲಾಗಿತ್ತು. ಆದರೆ ಹೊಸಕೋಟೆ, ಹಿರೇಕೆರೂರು, ಹೊಸಪೇಟೆ, ಕಾಗವಾಡ ಸೇರಿದಂತೆ ಎಂಟು ಕ್ಷೇತ್ರಗಳಲ್ಲಿ ಬಂಡಾಯವೇಳುವುದು ಖಚಿತವಾಗುತ್ತಿದ್ದಂತೆ, ಅಷ್ಟಕ್ಕೇ ನೇಮಕ ಮಾಡುವ ಮೂಲಕ ಬಿಜೆಪಿ 'ಜಾಣ' ನಡೆ ಅನುಸರಿಸಿದೆ.

**ನಿಗಮ ಮಂಡಳಿ ಮೂಲಕ ಸಂತೈಸಿದ ಹೈಕಮಾಂಡ್:** ಪ್ರಮುಖವಾಗಿ ಸದ್ಯ ನಿಗಮ ಮಂಡಳಿ ಸ್ಥಾನಗಳನ್ನು ಪಡೆದಿರುವ ಎಲ್ಲ ನಾಯಕರ ಪೈಕಿ ಬಚ್ಚೇಗೌಡ ಪುತ್ರ ಶರತ್ ಬಚ್ಚೇಗೌಡ ಹೊರತುಪಡಿಸಿ, ಇನ್ನುಳಿದ ಎಲ್ಲ ನಾಯಕರು ಕೆಲವೇ ಸಾವಿರದ ಅಂತರದಲ್ಲಿ ಸೋಲನ್ನು ಅನುಭವಿಸಿದ್ದರು. ಆದ್ದರಿಂದ ಅನರ್ಹರಿಗೆ ಕ್ಷೇತ್ರ ಬಿಟ್ಟುಕೊಡಲು ಹಿಂದೇಟು ಹಾಕಿದ್ದರು. ಆದರೀಗ ನಿಗಮ ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನ ನೀಡಿರುವುದರಿಂದ ಟಿಕೆಟ್ ಆಕಾಂಕ್ಷಿಯಾಗಿದ್ದರೂ ಈ ಯಾವ ನಾಯಕರು ಬಂಡಾಯ ಸಾರುವುದಿಲ್ಲ. ಇದರೊಂದಿಗೆ ಚುನಾವಣೆಗೆ ಸ್ಪರ್ಧಿಸುವ ಮೊದಲೇ ಆಯಕಟ್ಟಿನ ಸ್ಥಾನ ಸಿಕ್ಕಿರುವುದರಿಂದ ನಾಯಕರು ಅನರ್ಹರ ಪರವಾಗಿ ಬ್ಯಾಟಿಂಗ್ ಮಾಡುವುದು ಖಚಿತ. ಆದ್ದರಿಂದ ಸಿಎಂ ಈ ನಿರ್ಣಯ ತೆಗೆದುಕೊಂಡಿದ್ದಾರೆ ಎನ್ನಲಾಗಿದೆ.

### ಎಂಟು ಸ್ಥಾನವೂ ಅನರ್ಹರಿಗೆ ಮೀಸಲು

ಇನ್ನು 17 ಅನರ್ಹರ ಪೈಕಿ ಎಂಟು ಜನರಲ್ಲಿ ಮಾತ್ರ ಬಂಡಾಯದ ಬಿಸಿ ಹೆಚ್ಚಿತ್ತು. ಒಂದು ವೇಳೆ ಬಂಡಾಯ ಅಭ್ಯರ್ಥಿಗಳಾಗಿ ಇವರೆಲ್ಲ ಸ್ಪರ್ಧಿಸಿದ್ದರೆ ಚುನಾವಣೆ ಎದುರಿಸುವುದು ಕಷ್ಟವಾಗುತ್ತಿತ್ತು ಎನ್ನುವುದು ಖಾತ್ರಿಯಾಗಿತ್ತು. ಆದ್ದರಿಂದ ಈ ಬಂಡಾಯವನ್ನು ತಣಿಸುವಂತೆ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರಿದ್ದರಿಂದ ತಂತ್ರವನ್ನು ಅನುಸರಿಸಲಾಗಿದೆ. ಆದರೆ ಶರತ್ ರೀತಿ ಇನ್ನು ಕೆಲ ನಾಯಕರು ತಮಗೆ ನೀಡಿರುವ ಸ್ಥಾನವನ್ನು ನಿರಾಕರಿಸಿದರೆ ಏನು ಮಾಡಬೇಕೆಂಬ ಗೊಂದಲದಲ್ಲಿ ರಾಜ್ಯ ಬಿಜೆಪಿ ನಾಯಕರು ಇದೀಗ ಬಿದ್ದಿದ್ದಾರೆ.

### ಸ್ಥಾನ ತಿರಸ್ಕರಿಸಿದ ನಾಯಕರು

ಹೊಸಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಸ್ಪರ್ಧಿಸುವ ಬಗ್ಗೆ ಶರತ್ ಬಚ್ಚೇಗೌಡ ಸೇರಿದಂತೆ ಕಾಗವಾಡದ ಆಕಾಂಕ್ಷಿ ರಾಜು ಕಾಗೆ ಹಾಗೂ ಗೋಕಾಕ ಕ್ಷೇತ್ರದ ಅಶೋಕ್ ಪೂಜಾರಿ ಅವರಿಗೆ ನೀಡಲಾಗಿದ್ದ ನಿಗಮ ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನವನ್ನು ತಿರಸ್ಕರಿಸಿದ್ದಾರೆ. ಈ ಮೂವರು ಹೊಸಕೋಟೆ, ಕಾಗವಾಡ ಹಾಗೂ ಗೋಕಾಕ ಕ್ಷೇತ್ರದಲ್ಲಿ ಬಂಡಾಯವಾಗಿ ಸ್ಪರ್ಧಿಸುವ ಬಗ್ಗೆ ಚಿಂತಿಸಿರುವುದರಿಂದ ಈ ನಿರ್ಧಾರಕ್ಕೆ ಬಂದಿರುವುದಾಗಿ ಹೇಳಿದ್ದಾರೆ. ಈ ಮೂವರ ನಿರ್ಧಾರದಿಂದ ಬಿಜೆಪಿ ನಾಯಕರಿಗೆ ಹೊಸ ತಲೆಬಿಸಿಯಾಗಿದೆ.

### ಯಾರಿಗೆ ಯಾವ ನಿಗಮ

| | |
|---|---|
| ಅಶೋಕ ಪೂಜಾರಿ | ಅಧ್ಯಕ್ಷ, ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ |
| ಭರಮಗೌಡ (ರಾಜು) ಕಾಗೆ | ಅಧ್ಯಕ್ಷ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ಮಲಪ್ರಭಾ-ಘಟಪ್ರಭಾ ಯೋಜನೆ |
| ಯು.ಬಿ ಬಣಕಾರ್ | ಅಧ್ಯಕ್ಷ, ರಾಜ್ಯ ಕೃಷಿ ಉತ್ಪನ್ನ ಮತ್ತು ಸಂಸ್ಕರಣ ನಿಗಮ |
| ಬಸನಗೌಡ ತುರುವಿಹಾಳ | ಅಧ್ಯಕ್ಷ, ಕಾಡಾ ಪ್ರಾಧಿಕಾರ, ತುಂಗಭದ್ರಾ ಯೋಜನೆ |
| ವಿ.ಎಸ್ ಪಾಟೀಲ್ | ಅಧ್ಯಕ್ಷ, ವಾಯುವ್ಯ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ |
| ಎಚ್.ಆರ್ ಗವಿಯಪ್ಪ | ಅಧ್ಯಕ್ಷ, ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ |
| ನಂದೀಶ್ ರೆಡ್ಡಿ | ಉಪಾಧ್ಯಕ್ಷ, ಬಿಎಂಟಿಸಿ |
| ಶರತ್ ಬಚ್ಚೇಗೌಡ | ಅಧ್ಯಕ್ಷ, ಕರ್ನಾಟಕ ಗೃಹ ಮಂಡಳಿ |

> ಕರ್ನಾಟಕ ಗೃಹ ಮಂಡಳಿ ಹುದ್ದೆಯನ್ನು ನಿರಾಕರಿಸಿದ್ದು, ಈ ಬಗ್ಗೆ ನನಗೆ ಯಾವುದೇ ಮಾಹಿತಿಯಿಲ್ಲ. ಒಂದು ವೇಳೆ ಈ ಹುದ್ದೆ ಸಿಕ್ಕಿದ್ದರೂ ಉಪಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದರಿಂದ ಅದನ್ನು ತಗೆದುಕೊಳ್ಳುವುದಿಲ್ಲ.
>
> **ಶರತ್ ಬಚ್ಚೇಗೌಡ** ಬಜೆಪಿ ಮುಖಂಡ

# ಕೈನಲ್ಲಿ ಈಗಲೂ ಸಿದ್ದು ಪ್ರಶ್ನಾತೀತ ನಾಯಕ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವದ ಬಗ್ಗೆ ಪ್ರಶ್ನೆಗಳು ಮೂಡುತ್ತಿದ್ದರೂ, ಸಿದ್ದರಾಮಯ್ಯ ಅವರು ವಿರೋಧ ಪಕ್ಷದ ನಾಯಕನಾಗಿ ಆಯ್ಕೆಯಾಗುವ ಇನ್ನೊಮ್ಮೆ ತಾವು 'ಪ್ರಶ್ನಾತೀತ ನಾಯಕ' ಎನ್ನುವುದನ್ನು ಸಾಬೀತು ಪಡಿಸಿದ್ದಾರೆ.

ರಾಜ್ಯದಲ್ಲಿ ಮೈತ್ರಿ ಸರಕಾರ ಪತನಗೊಂಡ ದಿನ ದಿಂದಲೂ ವಿರೋಧ ಪಕ್ಷದ ನಾಯಕರಾಗಿ ಸಿದ್ದರಾಮಯ್ಯ ಆಯ್ಕೆಯಾಗುತ್ತಾರೆ ಎಂದು ಅನೇಕರು ಹೇಳುತ್ತಿದ್ದರೂ, ಮೂಲ ಕಾಂಗ್ರೆಸಿಗರು ಇದಕ್ಕೆ ಅವಕಾಶ ನೀಡುವುದಿಲ್ಲ. ಎಚ್.ಕೆ ಪಾಟೀಲ್, ರಮೇಶ್ ಕುಮಾರ್, ಪರಮೇಶ್ವರ ಅಥವಾ ಬೇರೆಯಾರಿಗಾದರೂ ಅವಕಾಶ ನೀಡುತ್ತಾರೆ ಹೊರೆತು ಸಿದ್ದರಾಮಯ್ಯ ಅವರಿಗೆ ನೀಡುವುದಿಲ್ಲ ಎನ್ನುವ ವಾದವನ್ನು ಕೆಲವರು ಮಂಡಿಸುತ್ತಿದ್ದರು. ಆದರೆ ಅಂತಿಮವಾಗಿ ವಿರೋಧ ಪಕ್ಷದ ನಾಯಕನಾಗಿ ಸಿದ್ದರಾಮಯ್ಯ ಅವರನ್ನೇ ವಿಪಕ್ಷ ನಾಯಕನಾಗಿ ಪಕ್ಷದ ಹೈಕಮಾಂಡ್ ಘೋಷಿಸುವ ಮೂಲಕ 'ಪ್ರಶ್ನಾತೀತ ನಾಯಕ' ಎನ್ನುವ ಸಂದೇಶವನ್ನು ರವಾನಿಸಿದೆ. ವಿರೋಧ ಪಕ್ಷದ ನಾಯಕರನ್ನಾಗಿ ಯಾರನ್ನು ಆಯ್ಕೆ ಮಾಡಬೇಕೆಂಬ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಕಾಂಗ್ರೆಸ್‌ನಲ್ಲಿ ಮೂಡಿದ್ದ ಹಲವು ಗೊಂದಲಗಳಿಗೆ ತೆರೆ ಎಳೆಯಲು, ಭಾನುವಾರ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮಧುಸೂದನ್ ಮಿಸ್ತ್ರಿ ಅವರ ನೇತೃತ್ವದ ವೀಕ್ಷಕರ ತಂಡ ರಾಜ್ಯ ಕಾಂಗ್ರೆಸ್ ನಾಯಕರ ಅಭಿಪ್ರಾಯವನ್ನು ಸಂಗ್ರಹಿಸಿತ್ತು.

→ 5

### ಸಿದ್ದು ಆಯ್ಕೆಗೆ ಕಾರಣವೇನು?

- ಮುಂದಿನ ದಿನದಲ್ಲಿ ಪಕ್ಷ ಸಂಘಟನೆಗೆ ಅನುಕೂಲ
- ಉಪಚುನಾವಣೆಯಲ್ಲಿ ಬಿಜೆಪಿ ಎದುರಿಸುವುದು ಸುಲಭ
- ರಾಜ್ಯದಲ್ಲಿ ಸಿದ್ದರಾಮಯ್ಯ ಅವರಿಗೆ ಮಾಸ್ ಲೀಡರ್ ವರ್ಚಸ್ಸು
- ಸಿದ್ದು ಮೇಲೆ ಈಗಲೂ ಪಕ್ಷದ ವರಿಷ್ಠರಿಗೆ ನಂಬಿಕೆ
- ಬಿಎಸ್‌ವೈ ಅವರನ್ನು ಎದುರಿಸಲು ಶಕ್ತ ನಾಯಕ

> ಸಿದ್ದರಾಮಯ್ಯ ಅವರನ್ನು ವಿಧಾನಸಭಾ ವಿಪಕ್ಷನಾಗಿ ಹಾಗೂ ಎಸ್.ಆರ್ ಪಾಟೀಲ್‌ರನ್ನು ವಿಧಾನಪರಿಷತ್ ವಿರೋಧ ಪಕ್ಷದ ನಾಯಕನಾಗಿ ಆಯ್ಕೆಮಾಡಲಾಗಿದೆ. ಇನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯತ್ವದಿಂದ ಸಿದ್ದರಾಮಯ್ಯ ಅವರನ್ನು ಕೈಬಿಡಲಾಗಿದ್ದು ಸ್ವತಃ ಕಾರ್ಯಕಾರಿಣಿಯಿಂದ ಕೈಬಿಡುವಂತೆ ಸಿದ್ದರಾಮಯ್ಯ ಮನವಿ ಮಾಡಿದ್ದರು.
>
> **- ಕೆ.ಸಿ ವೇಣುಗೋಪಾಲ್**
> ರಾಜ್ಯ ಕಾಂಗ್ರೆಸ್ ಉಸ್ತುವಾರಿ

# ಇ.ಡಿ. ಮುಂದೆ ಹಾಜರಾದ ರಾಜಣ್ಣ

**ದೆಹಲಿ:** ಮಾಜಿ ಸಚಿವ ಡಿ.ಕೆ. ಶಿವಕುಮಾರ್ ವಿರುದ್ಧ ದಾಖಲಾಗಿರುವ ಅಕ್ರಮ ಹಣ ವರ್ಗಾವಣೆ ಪ್ರಕರಣದ ಸಂಬಂಧದಲ್ಲಿ ಕರ್ನಾಟಕ ರಾಜ್ಯ ಅಪೆಕ್ಸ್ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷ ಹಾಗೂ ಕಾಂಗ್ರೆಸ್‌ನ ಮಾಜಿ ಶಾಸಕ ಕೆ.ಎನ್. ರಾಜಣ್ಣ ಅವರು ಬುಧವಾರ ಜಾರಿ ನಿರ್ದೇಶನಾಲಯದ (ಇ.ಡಿ.) ಸಮ್ಮುಖ ಹಾಜರಾದರು.

ಶಿವಕುಮಾರ್ ಅವರಿಗೆ ಸಂಬಂಧವಿದೆಯೆನ್ನಲಾದ ಸಕ್ಕರೆ ಕಂಪನಿಯೊಂದಕ್ಕೆ ಬ್ಯಾಂಕ್‌ನಿಂದ ಬಹುಕೋಟಿ ಸಾಲವನ್ನು ನೀಡಿರುವುದಕ್ಕೆ ಸಂಬಂಧಿಸಿ ರಾಜಣ್ಣ ಅವರನ್ನು ಪ್ರಶ್ನಿಸಲಾಗುವುದು ಎಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ ರಾಜಣ್ಣ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳುವುದರ ಜತೆಗೆ, ಶಿವಕುಮಾರ್ ಜತೆಗಿನ ಅವರ 'ಕೆಲವೊಂದು' ನಂಟುಗಳ ಕುರಿತೂ ತನಿಖೆ ನಡೆಸಲಾಗುವುದು ಎಂದು ತಿಳಿದುಬಂದಿದೆ.

# ಫೋಟೊ ಫ್ಲ್ಯಾಶ್‌ನಿಂದ ವಾಲಿದ ಅಂಬಾರಿ

**ಕೆ.ಬಿ.ರಮೇಶನಾಯಕ** ಮೈಸೂರು

ದೇವಿ ಚಾಮುಂಡೇಶ್ವರಿ ವಿಗ್ರಹವಿದ್ದ ಅಂಬಾರಿ ಸ್ವಲ್ಪ ವಾಲಿದ್ದು ಕಂಡುಬಂದಿತ್ತಾದರೂ ಯಾವುದೇ ಅನಾಹುತ ಸಂಭವಿಸಲಿಲ್ಲ. ವ್ಯಕ್ತಿಯೊಬ್ಬ ಫೋಟೊ ತೆಗೆಸಿಕೊಳ್ಳಲು ದಂತ ಹಿಡಿದು ಗಟ್ಟಿಯಾಗಿ ಜಗ್ಗಿದ್ದಲ್ಲದೆ, ಪೂಜಾರಿಯೊಬ್ಬರು ಅರ್ಜುನನ ಸಮೀಪದಲ್ಲೇ ನಿಂತು ಫ್ಲ್ಯಾಶ್ ಆನ್ ಮಾಡಿ ಫೋಟೊ ತೆಗೆದಿದ್ದೇ ಅಂಬಾರಿ ವಾಲಿಕೊಳ್ಳಲು ಪ್ರಮುಖ ಕಾರಣವೆಂದು ಹೇಳಲಾಗಿದೆ.

ಅಂಬಾರಿ ವಾಲಿದ ಬಗ್ಗೆ ರಾಜಮಾತೆ ಪ್ರಮೋದಾದೇವಿ ಒಡೆಯರ್ ಸೂಕ್ಷ್ಮವಾಗಿ ಹೇಳಿದ್ದರಿಂದ ಅರಣ್ಯ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಂಡು ಸರಿಪಡಿಸುವ ಕೆಲಸ ಮಾಡಿದರೂ ಈಗ ಯಾರೋ ಮಾಡಿದ ಅಚಾತುರ್ಯದ ಕೆಲಸಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ದೊಡ್ಡ ಮುಜುಗರಕ್ಕೆ ಸಿಲುಕಿಪೇಚಾಡುವಂತಾಗಿದೆ.

ಈ ವೇಳೆ ಅರಮನೆಯಿಂದ ಜಂಬೂಸವಾರಿ ವೀಕ್ಷಿಸಲು ನಿಂತಿದ್ದ ರಾಜಮಾತೆ ಪ್ರಮೋದಾದೇವಿ ಗಜಪಡೆ ಬಳಿ ಇದ್ದ ಸಿಬ್ಬಂದಿಗೆ ಅದನ್ನು ಸರಿ ಮಾಡುವಂತೆ ಕೈಸನ್ನೆ ಮಾಡಿದ್ದರು. ಈ ದೃಶ್ಯಾವಳಿಗಳು ಕ್ಯಾಮೆರಾ ಕಣ್ಣಲ್ಲಿ ಸೆರೆಯಾಗಿದೆ.

ಅರಮನೆಯ ಖಾಸಗಿ ನಿವಾಸ ಸಮೀಪವಿರುವ ಅಂಬಾರಿ ಕಟ್ಟುವ ಸ್ಥಳದಲ್ಲಿ ಮಂಗಳವಾರ ಮಧ್ಯಾಹ್ನ 3 ಗಂಟೆಯಿಂದ ಬಿಗಿ ಭದ್ರತೆಯಲ್ಲಿ ಅರ್ಜುನನ ಮೇಲೆ ಅಂಬಾರಿ ಕಟ್ಟುವ ಕಾರ್ಯವನ್ನು ಆರಂಭಿಸಲಾಗಿತ್ತು. ಮಾಧ್ಯಮದವರಿಗೆ ಪ್ರವೇಶ ನಿರ್ಬಂಧಿಸಿ ಕ್ರೇನ್ ಇದ್ದ ಸ್ಥಳದ ಸುತ್ತಲೂ ಶೀಟ್‌ನಿಂದ ಮುಚ್ಚಲಾಗಿತ್ತು. ಇದರಿಂದ ಆ ಸ್ಥಳದಲ್ಲಿ ಯಾರು ಇದ್ದಾರೆ, ಏನು ಮಾಡುತ್ತಿದ್ದಾರೆ ಎನ್ನುವುದೇ ಕಾಣದಂತಾಗಿತ್ತು. ಆದರೆ ಅರ್ಜುನನ ಬೆನ್ನು ಮತ್ತು ಅಂಬಾರಿ ಮಾತ್ರ ದೂರದಿಂದಲೇ ಗಮನಿಸಬಹುದಾಗಿತ್ತು.

ಸಂಜೆ 4.20ಕ್ಕೆ ಪುಷ್ಪಾರ್ಚನೆ ಮಾಡಲು ಮುಹೂರ್ತ ನಿಗದಿಪಡಿಸಿದ್ದರಿಂದ 2.50ಕ್ಕೆ ಅಂಬಾರಿ ಆನೆ ಅರ್ಜುನ, ಕುಮ್ಕಿ ಆನೆಗಳಾದ ವಿಜಯ, ಕಾವೇರಿಯನ್ನು ಕರೆತರಲಾಗಿತ್ತು. ಅರ್ಜುನನ ಬೆನ್ನಿನ ಮೇಲಿದ್ದ ಗಾದಿ, ನಮ್ದಾದ ಮೇಲೆ 750 ಕೆ.ಜಿ ತೂಕದ ಅಂಬಾರಿಯನ್ನು ಕ್ರೇನ್ ಸಹಾಯದಿಂದ ಇಟ್ಟು ಕಟ್ಟಲಾಗುತ್ತಿತ್ತು.

20 ವರ್ಷದಿಂದ ಅಂಬಾರಿ ಕಟ್ಟುವ ಕಾಯಕದಲ್ಲಿ ತೊಡಗಿರುವ ಅನುಭವಿ ಅಕ್ರಮ್ ಪಾಶ ಸೇರಿದಂತೆ 8 ಮಂದಿ ಪರಿಣಿತರೇ ಅಂಬಾರಿ ಕಟ್ಟುತ್ತಿದ್ದರು. ಆನೆಯ ಬೆನ್ನಿನ ಮೇಲಿಟ್ಟು ಬಿಗಿಯಾಗಿ ಕಟ್ಟಲು ಒಂದು ಗಂಟೆ ಬೇಕಾಗಲಿದ್ದು, ಮುಹೂರ್ತದ ಸಮಯಕ್ಕೆ ಸರಿಯಾಗಿ ಅಂಬಾರಿ ಹೊತ್ತ ಆನೆಯನ್ನು ಅತಿಥಿಗಳ ಮುಂದೆ ಕರೆದೊಯ್ಯುವ ಜವಾಬ್ದಾರಿ ಅಧಿಕಾರಿಗಳು ಹಾಗೂ ಅರಣ್ಯ ಸಿಬ್ಬಂದಿಗಳ ಮುಂದಿತ್ತು. ಈ ಹಿನ್ನೆಲೆಯಲ್ಲಿ ಅಂಬಾರಿ ಕಟ್ಟುವ ಕೆಲಸದಲ್ಲಿ ತಲ್ಲೀನರಾಗಿದ್ದರು. ಈ ವೇಳೆ ಮುಕ್ಕಾಲು ಭಾಗ ಅಂಬಾರಿ ಕೆಲಸ ಮುಗಿದಿದ್ದ ವೇಳೆ ಮೂವರ ಎಡವಟ್ಟು, ಮೂವರಿಗೆ ಕಂಟಕವಾಗಿ ಪರಿಣಮಿಸಿದರೂ ದೇವಿಯ ಆಶೀರ್ವಾದದಿಂದ ಕೂದಲೆಳೆ ಅಂತರದಲ್ಲಿ ಅಪಾಯದಿಂದ ಪಾರಾದರು ಎಂದು ಮೂಲಗಳು ಹೇಳಿವೆ.

### ಸ್ತಬ್ಧಚಿತ್ರಕ್ಕೆ ಬಹುಮಾನ

ಲಕ್ಷಾಂತರ ಪ್ರವಾಸಿಗರ ಕಣ್ಮನ ಸೆಳೆದ ಈ ಬಾರಿಯ ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಚಾಮರಾಜನಗರ ಜಿಲ್ಲೆಯ ಸಂಮೃದ್ಧಿ ಸಂಪತ್ತಿನ ನಡುವೆ ಹುಲಿಯ ಸಂತೃಪ್ತ ತಾಣ ಸ್ತಬ್ಧಚಿತ್ರಕ್ಕೆ ಪ್ರಥಮ ಬಹುಮಾನ ದೊರೆತಿದೆ. ಉತ್ತರಕನ್ನಡ ಜಿಲ್ಲೆಯ ಕದಂಬ, ಬನವಾಸಿಯ ಸ್ತಬ್ಧಚಿತ್ರಕ್ಕೆ ದ್ವಿತೀಯ, ತುಮಕೂರು ಜಿಲ್ಲೆಯ ನಡೆದಾಡುವ ದೇವರು ಸ್ತಬ್ಧಚಿತ್ರಕ್ಕೆ ಮೂರನೇ ಬಹುಮಾನ ಪಡೆದಿದೆ. ಚಿಕ್ಕಮಗಳೂರು ಜಿಲ್ಲೆಯ ಶಿಶಿಲ ಬೆಟ್ಟ ಸ್ತಬ್ಧಚಿತ್ರ, ವಾರ್ತಾ ಇಲಾಖೆಯ ಸರಕಾರದ ಸೌಲಭ್ಯಗಳ ಮಾಹಿತಿ, ಶಿವಮೊಗ್ಗ ಜಿಲ್ಲೆಯ ಫಿಟ್ ಇಂಡಿಯಾ ಸ್ತಬ್ಧಚಿತ್ರಗಳಿಗೆ ಸಮಾಧಾನಕರ ಬಹುಮಾನ ಬಂದಿದೆ. ತೀರ್ಪುಗಾರರಾಗಿ ಮೈಸೂರು ಆರ್ಟ್‌ಗ್ಯಾಲರಿಯ ಎಲ್. ಶಿವಲಿಂಗಪ್ಪ, ಕಾವಾ ನಿವೃತ್ತ ಡೀನ್ ಬಸವರಾಜ ಮುಸಾವಳಗಿ, ಉಪನ್ಯಾಸಕ ಎ.ಪಿ.ಚಂದ್ರಶೇಖರ್ ಪಾಲ್ಗೊಂಡಿದ್ದರು.

**ಜಂಬೂಸವಾರಿ ವೇಳೆ ವಾಲಿದ್ದ ಅಂಬಾರಿ: ಕೈಸನ್ನೆ ಮಾಡಿದ ರಾಜಮಾತೆ**

ವಿವರಪುಟ→ 5

# ವ್ಯಾಘ್ರಕ್ಕೇಕೆ ಕೊಲೆಗಡುಕನ ಪಟ್ಟ?

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದಲ್ಲಿ ಮನುಷ್ಯನ ಜೀವ ತೆಗೆದ ಹುಲಿಗಳಿಗೆ ನರ ಭಕ್ಷಕ ಎಂದು ಪಟ್ಟ ಕಟ್ಟುತ್ತಾರೆ. ಗ್ರಾಮಗಳತ್ತ ಸುಳಿಯುವ ಹುಲಿಗಳನ್ನು ಸೆರೆ ಹಿಡಿಯುವ ಕಾಯಕ ಅರಣ್ಯ ಇಲಾಖೆ ಮರೆತಿದೆ. ಚಾಮರಾಜನಗರದಲ್ಲಿ ಎರಡು ವ್ಯಕ್ತಿಗಳ ಜೀವ ತೆಗೆದ ಹುಲಿಯನ್ನು ಸೆರೆ ಹಿಡಿಯುವುದು ಬಿಟ್ಟು, ಕೊಲ್ಲುವ ನಿರ್ಧಾರಕ್ಕೆ ಬರುವುದು ಎಷ್ಟರ ಮಟ್ಟಿಗೆ ಸರಿ ಎಂಬುದು ಪ್ರಾಣಿ ಪ್ರಿಯರ ವಾದ.

ಬಂಡೀಪುರ ಅರಣ್ಯದಂಚಿನಲ್ಲಿ ಹುಲಿ ಹಾವಳಿ ಹೆಚ್ಚಾಗಿದೆ. ಜನ, ಜಾನುವಾರುಗಳ ಮೇಲೆ ಹುಲಿರಾಯ ಪದೇಪದೆ ದಾಳಿ ನಡೆಸುತ್ತಿದ್ದಾನೆ. ಒಂದು ತಿಂಗಳ ಅವಧಿಯಲ್ಲಿ ಇಬ್ಬರು ರೈತರು ಹುಲಿ ಬಾಯಿಗೆ ಸಿಕ್ಕಿ ಪ್ರಾಣಬಿಟ್ಟಿದ್ದಾರೆ. ಮೊದಲ ಬಾರಿ ಹುಲಿ ದಾಳಿ ಮಾಡಿದಾಗ ಸ್ಥಳಿಯರು ಎಚ್ಚೆತ್ತುಕೊಂಡಿದ್ದರೆ, ಮತ್ತೊಂದು ಜೀವ ಬಲಿಯಾಗುತ್ತಿರಲಿಲ್ಲ. ಇಂತಹ ಸನ್ನಿವೇಶಗಳು ನಡೆಯುವ ಮುನ್ನ ಅರಣ್ಯಾಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳು ಮೂಲೆಗುಂಪಾಗಿವೆ. ಹುಲಿಗಳ ಸಂತತಿ ರಾಜ್ಯದಲ್ಲಿ ಕ್ಷೀಣಿಸುತ್ತಿದ್ದು, ಕೊಲ್ಲುವ ನಿರ್ಧಾರ ಸೂಕ್ತವಲ್ಲ.

2 ದಿನಗಳಲ್ಲಿ ಹುಲಿ ಹಿಡಿಯುವುದಾಗಿ, ಇಲ್ಲವೇ ಶೂಟೌಟ್ ಮಾಡುವ ಆಶ್ವಾಸನೆಯನ್ನು ಅರಣ್ಯಾಧಿಕಾರಿ ಸೂಚನೆ ನೀಡಿದ್ದಾರೆ. ಆದರೆ, ಇನ್ನೂ ಹುಲಿ ಸೆರೆಹಿಡಿಯಲು ಕಾರ್ಯಾಚರಣೆ ಆರಂಭಿಸಿಲ್ಲ. ತಮ್ಮ ತಪ್ಪು ಮರೆ ಮಾಚಿಕೊಳ್ಳಲು ಕೊಲ್ಲುವ ನಿರ್ಧಾರಕ್ಕೆ ಬಂದಿದ್ದಾರೆ. ಹೀಗಾಗಿ ಹುಲಿ ಹಿಡಿಯಲು ಗಂಭೀರ ಕ್ರಮ ಕೈಗೊಳ್ಳದ ಅರಣ್ಯಾಧಿಕಾರಿಗಳ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನರ ಭಕ್ಷಕ ಹುಲಿಯನ್ನು ಸೆರೆಹಿಡಿಯದಿದ್ದರೆ, ಮತ್ತಷ್ಟು ಜನ-ಜಾನುವಾರುಗಳು ಪ್ರಾಣ ಕಳೆದುಕೊಳ್ಳುವುದರಲ್ಲಿ ಯಾವುದೇ ಅನುಮಾನವಿಲ್ಲ. ಏಕೆಂದರೆ ಒಂದು ತಿಂಗಳ ಅವಧಿಯಲ್ಲಿ ಇಬ್ಬರು ವ್ಯಕ್ತಿಗಳು ಹುಲಿ ದಾಳಿಗೆ ಬಲಿಯಾಗಿದ್ದಾರೆ. ಹೀಗಾಗಿ ಬಂಡೀಪುರ ಅರಣ್ಯದಂಚಿನ ಗ್ರಾಮಸ್ಥರು ಭಯಭೀತರಾಗಿದ್ದಾರೆ. ಇನ್ನಾದರೂ ಸಂಬಂಧಪಟ್ಟ ಅರಣ್ಯಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ಕಾರ್ಯಾಚರಣೆ ಆರಂಭಿಸಿ ಹುಲಿಯನ್ನು ಸೆರೆ ಹಿಡಿಯಬೇಕೆಂಬುದು ಗ್ರಾಮಸ್ಥರ ಆಗ್ರಹವಾಗಿದೆ.

14 ಮಂದಿಯನ್ನು ಕೊಂದಿದ್ದ ಅವನಿ ಹುಲಿಗೆ ಅತ್ಯಂತ ತರಾತುರಿಯಲ್ಲಿ ಗುಂಡು ಹಾರಿಸಲಾಗಿದೆ. ಆ ಹುಲಿಯನ್ನು ಸೆರೆಹಿಡಿಯುವ ಕಾರ್ಯಾಚರಣೆಯಲ್ಲಿ ಸಾಮಾನ್ಯ ಕಾರ್ಯನಿರ್ವಹಣಾ ಪ್ರಕ್ರಿಯೆಗಳನ್ನು ಉಲ್ಲಂಘಿಸಲಾಗಿತ್ತು. ರಾಜ್ಯದಲ್ಲಿ ಹುಲಿ ಸಂರಕ್ಷಣೆಗೆ ಹಾಗೂ ಅರಣ್ಯದಂಚಿತ ಗ್ರಾಮಗಳಿಗೆ ಪ್ರವೇಶ ತಡೆಯುವಲ್ಲಿ ಅರಣ್ಯ ಇಲಾಖೆ ಪಾತ್ರ ಶೂನ್ಯ.

**ಹುಲಿಯನ್ನು ಕೊಲ್ಲಬೇಡಿ, ಸೆರೆ ಹಿಡಿಯಿರಿ: ಸಿ.ಸಿ ಪಾಟೀಲ್:** ಹುಲಿಯನ್ನು ಕೊಲ್ಲದೆ, ಕಾರ್ಯಾಚರಣೆ ಮೂಲಕ ಹುಲಿಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ಸಚಿವ ಸಿ.ಸಿ.ಪಾಟೀಲ್ ಅರಣ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ. ಗುಂಡ್ಲುಪೇಟೆಯ ಗೋಪಾಲಸ್ವಾಮಿ ಬೆಟ್ಟ ವಲಯದ ಚೌಡಹಳ್ಳಿ ಗ್ರಾಮದ ಬಳಿ ಜಮೀನಿನಲ್ಲಿ ಮಂಗಳವಾರ ಹಸುಗಳನ್ನು ಮೇಯಿಸುತ್ತಿದ್ದ ಶಿವಲಿಂಗಪ್ಪ (60) ಎಂಬುವರ ಮೇಲೆ ಹುಲಿ ದಾಳಿ ಮಾಡಿತ್ತು. ಇವರ ಕುಟುಂಬಕ್ಕೆ 5 ಲಕ್ಷ ಪರಿಹಾರವನ್ನು ಘೋಷಿಸಿದ್ದಾರೆ.

→ 5

### ಅಧಿಕಾರಿ ಮತ್ತು ಸದಸ್ಯರ ನಡುವೆ ಮಾತಿನ ಚಕಮಕಿ

ಚಾಮರಾಜನಗರದ ಬಂಡೀಪುರದಲ್ಲಿ ಹುಲಿ ಹಿಡಿಯುವ ಸಂಬಂಧ ಅರಣ್ಯ ಇಲಾಖೆ ಅಧಿಕಾರಿ ಮತ್ತು ಪ್ರಾಣಿ ದಯಾ ಸಂಘದ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದಿದೆ. ಈ ಸಂಬಂಧ ಮಲ್ಲೇಶ್ವರಂನ ಅರಣ್ಯ ಭವನದಲ್ಲಿ ನಡೆದ ಅಧಿಕಾರಿಗಳು ಹಾಗೂ ಪ್ರಾಣಿದಯಾ ಸಂಘದವರ ಸಭೆಯಲ್ಲಿ ವಾಗ್ವಾದ ನಡೆದಿದೆ. ನಿನ್ನೆಯಷ್ಟೇ ದುರ್ಗಿ ಆರಾಧನೆ ಮಾಡಿದ್ದೇವೆ. ಮೊದಲೇ ರಾಜ್ಯದ ಅರಣ್ಯದಲ್ಲಿ ಹುಲಿಗಳ ಸಂಖ್ಯೆ ಇಳಿಮುಖವಾಗಿದೆ. ಈ ಹುಲಿಯನ್ನು ಕೊಲ್ಲಬೇಡಿ ಎಂದು ಅರಣ್ಯ ಇಲಾಖೆ ಅಧಿಕಾರಿ ಸಂಜಯ್ ಮೌನಿಗೆ ಪ್ರಾಣಿ ದಯಾ ಸಂಘದವರು ಮನವಿ ಸಲ್ಲಿಸಿದರು.